ಕಥೆಗಾರ ಮತ್ತು ಕಾದಂಬರಿಕಾರ ಡಾ. ಗುರುಪ್ರಸಾದ್ ಕಾಗಿನೆಲೆ ಪ್ರಸ್ತುತ ಅಮೆರಿಕದ ಮಿನೆಸೊಟಾದ ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜನ್ಸಿ ಮೆಡಿಸಿನ್ ವಿಭಾಗದಲ್ಲಿ ವೈದ್ಯರು. 'ನಿರ್ಗುಣ', 'ಲೋಲ', 'ಆಚೀಚೆಯ ಕಥೆಗಳು' ಅವರ ಪ್ರಸಿದ್ಧ ಕಥಾ ಸಂಕಲನಗಳು. 'ಹಿಜಾಬ್' ಹಾಗೂ 'ಕಾಯಾ' ಬಹುಚರ್ಚಿತ ಕಾದಂಬರಿಗಳು. 'ವೈದ್ಯ, ಮತ್ತೊಬ್ಬ' ಪ್ರಬಂಧಗಳ ಸಂಕಲನ. ಮೂಲತಃ ಶಿವಮೊಗ್ಗದವರು.

ರೂಪಾಂತರಹೊಂದುವಷ್ಟು ಚಿಕ್ಕಂದಿನಲ್ಲಿ ನನ್ನನ್ನು ಕಂಗೆಡಿಸಿದ್ದರೇ?

ಈ ಸೈಕಿಯಾಟ್ರಿ ಸ್ನೇಹಿತನ ಸಹವಾಸ ಬೇಡ ಎನ್ನಿಸಿತು. ಕನಸಿನಲ್ಲಿಯೂ ರಸ್ತೆಯ ನಿಯಮಗಳನ್ನು ಪಾಲಿಸುವ ನನ್ನ ನಿಯಮಬದ್ಧತೆಗೆ ಕಾರಣ ಏನು ಎಂದು ಕೇಳಬೇಕೆನಿಸಿದರೂ ಮತ್ತೆ ಇನ್ನೇನಾದರೂ ಮಿತಿಯನ್ನು ಮೀರಲಾಗಿಲ್ಲ ಎನ್ನುತ್ತಾನೆ ಎಂದು ಮತ್ತೆ ಪ್ರಶ್ನೆ ಕೇಳಲು ಹೋಗಲಿಲ್ಲ.

ನನಗೆ ಆಗಾಗ್ಗೆ ಬೀಳುವ ಇನ್ನೊಂದು ಕನಸು ನನ್ನ ವೃತ್ತಿಯ ಬಗ್ಗೆ. ನಾನು ಎಂಬಿಬಿಎಸ್ ಮಾಡಿದ್ದು ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ. ಮುಗಿದು ಮೂವತ್ತು ವರ್ಷಗಳೇ ಆಗಿವೆ. ನಾನು ಅಮೆರಿಕದಲ್ಲಿ ತುರ್ತುವೈದ್ಯನಾಗಿ ನನ್ನ ಕೆಲಸವನ್ನು ಆರಂಭಿಸಿಯೇ ಇಪ್ಪತ್ತೈದು ವರ್ಷಗಳು ಕಳೆದಿವೆ. ಆದರೂ, ಈ ಕನಸು ನನಗೆ ಮತ್ತೆ ಮತ್ತೆ ಬೀಳುತ್ತದೆ.

ನಾನು ಮತ್ತೆ ಬಳ್ಳಾರಿ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿ, ವಾರ್ಡಿನಲ್ಲಿ ನಮ್ಮ ಪ್ರೊಫೆಸರರ ಜತೆ ರೌಂಡ್ಸ್ ಮಾಡುತ್ತಿರುತ್ತೇನೆ. ಬಳ್ಳಾರಿಗೆ ವಿದ್ಯಾರ್ಥಿಯಾಗಿ ವಾಪಸ್ಸು ಹೋಗಲು ಒಂದು ಬಲವಾದ ಕಾರಣವಿದೆ. ಅಮೆರಿಕದಲ್ಲಿ ನಾನು ಕೆಲಸ ಕಳೆದುಕೊಂಡಿದ್ದೇನೆ, ಅಥವಾ ನನ್ನ ಅಮೆರಿಕದ ಡಿಗ್ರಿ ಮಾನ್ಯತೆ ಕಳಕೊಂಡಿದೆ, ನಮ್ಮ ಪ್ರೊಫೆಸರರನ್ನು 'ಬಳ್ಳಾರಿಗೆ ಬಂದು ಎಂಡಿ ಮಾಡಬಹುದೇ' ಎಂದು ಕೇಳಿಕೊಳ್ಳುತ್ತೇನೆ. ಅವರು 'ಖಂಡಿತಾ ಬಾ' ಎಂದು ಕರೆಯುತ್ತಾರೆ. ನಾನು ಬಿಟ್ಟ ಬಳ್ಳಾರಿಯ ವಾರ್ಡಿಗೆ ವಾಪಸಾಗುತ್ತೇನೆ. ಒಟ್ಟು ಭಾರತಕ್ಕೆ, ಅದೂ ಬಳ್ಳಾರಿಗೆ ವಾಪಸಾಗುವುದು ನನ್ನ ವರ್ತಮಾನದ ಜೀವನದಲ್ಲಿ ಏನೋ ಕಳಕೊಂಡ ನಂತರ. ಒಂದು ರೀತಿ ಅವಮಾನಿತನಾಗಿ. ಆ ಅವಮಾನ ನನ್ನ ಅಣುಅಣುವಿನಲ್ಲಿಯೂ ತುಂಬಿರುತ್ತದೆ. ಅದು ನನಗೆ ಕನಸಿನಲ್ಲಿಯೂ ಅನುಭವವಾಗಿ ಕಂಗೆಡುವ ಹಾಗಾಗುತ್ತದೆ.

ಇನ್ನೊಂದು ವಿಚಿತ್ರವೆಂದರೆ, ನಮ್ಮ ಯುನಿಟ್ಟಿನಲ್ಲಿರುವ ಎಲ್ಲರಿಗೂ ನಾನು ಬಳ್ಳಾರಿ ಬಿಟ್ಟಾಗ ಎಷ್ಟು ವಯಸ್ಸಾಗಿತ್ತೋ ಅಷ್ಟೇ ವಯಸ್ಸಾಗಿದೆ. ನನಗೆ ಮಾತ್ರ ಐವತ್ತು ದಾಟಿದೆ. ಪ್ರೊಫೆಸರರು ನನ್ನ ವಯಸ್ಸು, ಅನುಭವವನ್ನು ಗಮನದಲ್ಲಿಟ್ಟುಕೊಂಡು ಕ್ಲಿಷ್ಟಕರವಾದ ಪ್ರಶ್ನೆಯನ್ನು ಕೇಳುತ್ತಾರೆ. ಹಾಗೆಯೇ ಕೆಲವೊಂದು 'ಸಮಸ್ಯೆಯ ಕೇಸು'ಗಳನ್ನು ನನ್ನ ಸುಪರ್ದಿಗೆ ಒಪ್ಪಿಸುತ್ತಾರೆ. ಆದರೆ, ನನ್ನ ಕನಸಿನ ಬಳ್ಳಾರಿಯ ಮೆಡಿಕಲ್ ಕಾಲೇಜಿನಲ್ಲಿ ಆಧುನಿಕ ರೋಗನಿದಾನದ ಉಪಕರಣಗಳಾದ ಅಲ್ಟ್ರಾಸೌಂಡು, ಸಿಟಿ ಸ್ಕ್ಯಾನುಗಳು ಯಾವವೂ ಇಲ್ಲ. ನಾನು ನಮ್ಮ ಪ್ರೊಫೆಸರರು ಕಲಿಸಿಕೊಟ್ಟ ಹಳೆಯ ರೀತಿಯಲ್ಲಿ ರೋಗಿಯನ್ನು ನೋಡಿ, ಮುಟ್ಟಿ, ಎದೆಗೂಡಿನ ಮೇಲೆ ಡಬಡಬ ಹೊಡೆದು, ಸ್ಟೆತೊಸ್ಕೋಪಿನಲ್ಲಿ ಪರೀಕ್ಷಿಸುತ್ತೇನೆ. ಆ ಸ್ಟೆತೊಸ್ಕೋಪ್ ಮಾತ್ರ ಅಮೆರಿಕದ ಅತ್ಯಾಧುನಿಕ 'ಲಿಟ್‌ಮನ್' ಕಂಪನಿಯದು.

ನಾನು ಕಷ್ಟಪಟ್ಟು ಗಂಟಾನುಗಟ್ಟಲೆ ಪರೀಕ್ಷೆ ಮಾಡಿ ಕಾಯಿಲೆಯನ್ನು ಪತ್ತೆ ಹಚ್ಚಿ ನಮ್ಮ ಯುನಿಟಿನವರಿಗೆ ಹೇಳಿದಾಗ, ಅಲ್ಲಿದ್ದ ನನ್ನ ಮಗಳ ವಯಸ್ಸಿನ ವೈದ್ಯಕೀಯ ವಿದ್ಯಾರ್ಥಿಯೊಬ್ಬ, 'ಐ ನೋ' ಎಂದು ಯಾವ ಭಾವನೆಯೂ ಇಲ್ಲದೇ ಹೇಳುತ್ತಾನೆ. ನಾನು ಆಶ್ಚರ್ಯಭರಿತನಾಗಿ ಆತನನ್ನು ನೋಡಲು, 'ಸಿಟಿ ಸ್ಕ್ಯಾನಿನಲ್ಲಿ ನಾನಾಗಲೇ ನೋಡಿದೆ' ಎಂದು ಚೂಯಿಂಗ್ ಗಮ್ ಅಗಿಯುತ್ತಾ ಹೇಳುತ್ತಾನೆ. 'ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಸಿಟಿ ಸ್ಕ್ಯಾನಿದೆಯಾ?' ಎಂದು ನಾನು ಕೇಳುತ್ತೇನೆ. ಆತ ಯಾವುದೋ